## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಅಬ್ದುಲ್ ಜಬ್ಬಾರ್ ಇವರ ಶೂನ್ಯ ವೇಳೆ ಪ್ರಸ್ತಾಪಕ್ಕೆ ಉತ್ತರ

**ಪ್ರಶ್ನೆ 1:**

2019-20 ರಲ್ಲಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು, ಕೆರೆಬಿಳಚಿ ಮತ್ತು ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ಮೊರಾರ್ಜಿ ದೇಸಾಯಿ ಶಾಲೆಯ ಆವರಣದಲ್ಲಿ ನಿರ್ಮಿಸಲಾದ ಎಸ್.ಟಿ.ಪಿ ಪ್ಲಾಂಟ್‌ಗಳು ತುಂಬಾ ಕಳಪೆಯಾಗಿದ್ದು, ಸುಮಾರು ರೂ.1.17 ಕೋಟಿ ಖರ್ಚು ಮಾಡಲಾಗಿತ್ತು, ಅಷ್ಟು ಖರ್ಚು ಮಾಡಿದರು ಕಳಪೆ ಕಾಮಗಾರಿಯಿಂದಾಗಿ ಯಾವುದೇ ಪ್ರಯೋಜನಕ್ಕೆ ಬರಲಿಲ್ಲ.

**ಇದೇ ರೀತಿ ದಾವಣಗೆರೆ ಸರ್ಕಾರಿ ಐ.ಟಿ.ಐ. ಕಾಲೇಜು ಕಳಪೆ ಕಟ್ಟಡ ನ್ಯಾಮತಿ, ಮಾಯಕೊಂಡ ಹೀಗೆ ಹಲವಾರು ಕಡೆಗಳಲ್ಲಿ ನಿರ್ಮಿತಿ ಕೇಂದ್ರಗಳು ಹಗರಣಗಳ ಸರಮಾಲೆಯಾಗುತ್ತಿವೆ. ದಾವಣಗೆರೆ ನಿರ್ಮಿತಿ ಕೇಂದ್ರದಲ್ಲಿ ನಡೆದಿರುವ ಹಗರಣಗಳ ಕುರಿತು ಮಾದ್ಯಮಗಳಲ್ಲಿ ಸಾಕಷ್ಟು ಬಾರಿ ಪ್ರಕಟವಾಗಿದ್ದರೂ ಸಂಬಂಧಪಟ್ಟ ಅಧಿಕಾರಿಗಳು ಮೌನವಾಗಿರುವುದೇಕೆ ?**

**ನಿರ್ಮಿತಿ ಕೇಂದ್ರಕ್ಕೆ ಜಿಲ್ಲಾಧಿಕಾರಿ ಅಧ್ಯಕ್ಷರಾಗಿದ್ದರೇ, ಜಿಲ್ಲಾ ಪಂಚಾಯತ್ ಸಿ.ಇ.ಓ. ಕಾರ್ಯಾಧ್ಯಕ್ಷರಾಗಿರುತ್ತಾರೆ. ನಿರ್ಮಿತಿ ಕೇಂದ್ರಕ್ಕೆ ಸಂಬಂಧಿಸಿದ ಎಲ್ಲಾ ಕಾಮಗಾರಿ, ಅನುದಾನಗಳು ಇವರುಗಳ ಗಮನಕ್ಕೆ ಬಾರದೇ ನಡೆಯತ್ತಿದೆಯೇ ಎಂಬುದೇ ಪ್ರಶ್ನೆಯಾಗಿದೆ ಹಾಗೂ ಇವರ ಮೌನ ಸಂಶಯಕ್ಕೆ ಎಡೆಮಾಡಿಕೊಡುತ್ತಿದೆ.**

ಆದುದರಿಂದ, ಸದರಿ ವಿಷಯದ ಕುರಿತು ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಹಾಗೂ ಮುಂದಿನ ದಿನಗಳಲ್ಲಿ ನಿರ್ಮಿತಿ ಕೇಂದ್ರಗಳಲ್ಲಿ ಹಗರಣಗಳು ನಡೆಯದಂತೆ ನಿಗವಹಿಸುವ ಕುರಿತು.

**ಉತ್ತರ:**

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು, ಕೆರೆಬಿಳಚಿ ಮತ್ತು ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ಮೊರಾರ್ಜಿ ದೇಸಾಯಿ ಶಾಲೆಯ ಆವರಣದಲ್ಲಿ ನಿರ್ಮಿಸಲಾದ ಎಸ್.ಟಿ.ಪಿ ಪ್ಲಾಂಟ್ ಕಾಮಗಾರಿಗಳು, ಪ್ರತಿ ಕಾಮಗಾರಿಗೆ ರೂ.58.60 ಲಕ್ಷಗಳ ಅಂದಾಜಿನಂತೆ ದಿನಾಂಕ:15.05.2019 ರಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕಾರ್ಯಾದೇಶ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ಅನುಮೋದಿತ ಅಂದಾಜು ವೆಚ್ಚದಲ್ಲಿ ದಿನಾಂಕ:12.02.2020 ರಂದು ಪೂರ್ಣಗೊಳಿಸಿ, ದಿನಾಂಕ:18.09.2021 ರಂದು ಕಾಮಗಾರಿ ವಹಿಸಿದ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.

ದಾವಣಗೆರೆ ಸರ್ಕಾರಿ ಐ.ಟಿ.ಐ. ಕಾಲೇಜು ಕಟ್ಟಡವು ರೂ.108.61 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಉದ್ಯೋಗ ಮತ್ತು ತರಬೇತಿ, ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆಯ ವತಿಯಿಂದ ದಿನಾಂಕ:26.03.2021 ರಂದು ಕಾರ್ಯಾದೇಶ ನೀಡಲಾಗಿದ್ದು, ನಿರ್ಮಾಣದ ಗುಣಮಟ್ಟ ಕಾಪಾಡಿಕೊಂಡು ದಿನಾಂಕ:05.08.2022 ರಂದು ಕಾಮಗಾರಿಯನ್ನು ಮುಕ್ತಾಯಗೊಳಿಸಿ, ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.

ನ್ಯಾಮತಿ ತಾಲ್ಲೂಕು ಸೂರಗೊಂಡನ ಕೊಪ್ಪಗ್ರಾಮದಲ್ಲಿ ಮಧ್ಯವರ್ಜನ ಶಿಬಿರ ಕಟ್ಟಡವನ್ನು ರೂ.132.30 ಲಕ್ಷಗಳ ಅಂದಾಜು ಮೊತ್ತದಲ್ಲಿ ಕಾರ್ಯಾನಿರ್ವಹಿಸಲು ದಿನಾಂಕ:28.01.2020 ರಂದು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಸದರಿ ಕಾಮಗಾರಿಯನ್ನು ನಿರ್ಮಾಣದ ಗುಣಮಟ್ಟ ಕಾಪಾಡಿಕೊಂಡು ದಿನಾಂಕ:13.02.2021 ರಂದು ಮುಕ್ತಾಯಗೊಳಿಸಿ ಉಪಯೋಗಿತ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.

ಮಾಯಕೊಂಡ ಕ್ಷೇತ್ರದ ದಾವಣಗೆರೆ ತಾಲ್ಲೂಕು ಹನುಮನ ಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕೇಂದ್ರದ ಆವರಣಗೋಡೆ ನಿರ್ಮಾಣ ಕಾಮಗಾರಿ ರೂ.05.00 ಲಕ್ಷಗಳ ಮೊತ್ತದಲ್ಲಿ ಕಾಮಗಾರಿ ನಿರ್ವಹಿಸಲು ದಿನಾಂಕ:30.07.2022 ರಂದು ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಈ ಕಾಮಗಾರಿಯನ್ನು ದಿನಾಂಕ:10.03.2023 ರಂದು ಉಪಯೋಗಿತ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.

ಅನುಮೋದಿತ ಅಂದಾಜು ಪಟ್ಟಿಗಳಂತೆ ಮೇಲ್ಕಂಡ ಎಲ್ಲಾ ಕಾಮಗಾರಿಗಳನ್ನು ಕೈಗೊಂಡು ಉಪಯೋಗಿತ ಇಲಾಖೆಗಳಿಗೆ ಹಸ್ತಾಂತರಿಸಲಾಗಿದೆ. ಈ ಕಾಮಗಾರಿಗಳಲ್ಲಿ ನ್ಯೂನತೆ ಅಥವಾ ತೊಂದರೆಗಳಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.

ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರು ನಿರ್ಮಿತಿ ಕೇಂದ್ರದ ಪದನಿಮಿತ್ತ ಅಧ್ಯಕ್ಷರು ಮತ್ತು ಕಾರ್ಯಾಧ್ಯಕ್ಷರಾಗಿರುತ್ತಾರೆ. ಸಂಸ್ಥೆಯ ನಿಯಮಾವಳಿಯಂತೆ ಕಾಮಗಾರಿಗಳ ಪ್ರಗತಿಯನ್ನು ಆಡಳಿತ ಮಂಡಳಿಯಲ್ಲಿ ಪರಿಶೀಲಿಸಲಾಗುತ್ತಿದೆ. ಕಾಮಗಾರಿಗಳ ಕುರಿತು ಯಾವುದೇ ದೂರುಗಳಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಸಂಬಂಧ ದಾವಣಗೆರೆ ನಿರ್ಮಿತಿ ಕೇಂದ್ರ ಕೈಗೊಂಡಿರುವ ಕಾಮಗಾರಿಗಳಲ್ಲಿ ಕಳಪೆ ಕಾಮಗಾರಿಗಳಲ್ಲಿರುವ ನ್ಯೂನತೆ ಮತ್ತು ಮತ್ತು ಹಣದುರುಪಯೋಗ ಹಾಗೂ ಕಾಮಗಾರಿ ಗುಣಮಟ್ಟದಲ್ಲಿ ಕಳಪೆ ಕಂಡುಬಂದಿದ್ದಲ್ಲಿ ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗುವುದು.

ಸಂಖ್ಯೆ: ವಇ 536 ಹೆಚ್‌ಎಎಂ 2025

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು